ನಡುವೆಯೂ ಇರಬಹುದು. ಅಥವಾ ಇಡೀ ಕತೆಯ ಹುಟ್ಟಿಗೆ ಕಾರಣವಾಗಿಯೂ ಮೂರ್ತವಾಗದೇ ಹೋಗಬಹುದು. ಈ ಕಾಣ್ಕೆ ಮನಸ್ಸಿನಲ್ಲಿ ಆಳವಾಗಿ ಬೇರು ಬಿಟ್ಟು ಸೊಂಪಾಗಿ ಬೆಳೆದು ವಿಸ್ಮಯಕಾರೀ ಅನುಭವವಾಗುವ ಪ್ರಕ್ರಿಯೆಯೇ ಕತೆ. ಬಿಳಿ ಹಾಳೆಯ ಮೇಲೆ ಕತೆ ಹರಿಯುತ್ತಾ ಹೋದಂತೆ ಅವು ತೆಗೆದುಕೊಳ್ಳುತ್ತಾ ಹೋಗುವ ಅನಿರೀಕ್ಷಿತ ತಿರುವುಗಳು, ಅವುಗಳಿಂದ ಸಿಗುವ ಒಳನೋಟಗಳು ಮೂಡಿಸುವ ಅಚ್ಚರಿ ಇಡೀ ಕ್ರಿಯೆಯಲ್ಲಿ ದೊರಕುವ ರೋಮಾಂಚಕ ಅನುಭವ .

ನನ್ನ ಕತೆಗಳು ಹುಟ್ಟುವುದೇ ಹಾಗೆ. ಎಲ್ಲೋ ಕಂಡ ದೃಶ್ಯ, ಯಾವುದೋ ಅನುಭವ, ಕನಸಲ್ಲಿ ಬಂದ ವಿಚಿತ್ರ ವ್ಯಕ್ತಿ, ಯಾರೋ ಹೇಳಿದ ಗುಟ್ಟು. ನನ್ನ ಮನಸ್ಸಿನಲ್ಲಿ ಬೇರು ಬಿಟ್ಟು ಬೆಳೆದು ಕಾಡಿ ಬೇಡಿ ಆವರಿಸಿ ಬರೆಸಿಕೊಳ್ಳುತ್ತಲೇ ಕತೆಗಳಾಗಿ ಬೇರೆ ಬೇರೆ ರೂಪದಲ್ಲಿ ಅಭಿವ್ಯಕ್ತವಾಗಿ ಬಿಡುತ್ತವೆ... ನನ್ನ ಯಾವ ಕತೆಗಳ ವಿನ್ಯಾಸವೂ ಪ್ರಜ್ಞಾಪೂರ್ವಕವಲ್ಲ. ನಾನು ಪ್ರತಿ ಕತೆ ಬರೆಯುತ್ತ ಹೋದಂತೆ ಅದರದೇ ಆದ ಒಂದು ಭಾಷೆ, ಅದಕ್ಕೆ ಹೊಂದುವ ತಂತ್ರ ನನಗೆ ಅರಿವಿಲ್ಲದೆಯೇ ರೂಪಗೊಳ್ಳುತ್ತಾ ಹೋಗುತ್ತದೆ. ಅದನ್ನು ನಾನು ಎಂದೂ ಪ್ರಜ್ಞಾಪೂರ್ವಕವಾಗಿ ಮಾಡಿದ್ದಲ್ಲ. ಹಿಂದಿರುಗಿ ನೋಡಿದರೆ ನನ್ನ ಪ್ರತಿ ಕತೆಯ ತಂತ್ರ ಬೇರೆ ಬೇರೆಯೇ ಇರುವುದು ಗೋಚರವಾಗುತ್ತದೆ. ಈ ಬದಲಾವಣೆ ನನ್ನ ಬರವಣಿಗೆಯಲ್ಲಿ ನನ್ನ ಮನಸ್ಸಿಗೂ ಏಕತಾನತೆ ಬರದಂತೆ ನನ್ನನ್ನು ಕಾಪಾಡಿ ಲವಲವಿಕೆ ಹುಟ್ಟಿಸುತ್ತದೆ.

ಮೊದಲಿನಿಂದ ನನಗೆ ಕತೆಗಳೆಂದರೆ ಪ್ರಾಣ... ಚಿಕ್ಕಂದಿನಲ್ಲಿ ದೊಡ್ಡವರಿಂದ ಕೇಳಿದ ಪುರಾಣದ ಕತೆಗಳು, ಗೆಳತಿಯರಿಂದ ಕೇಳಿದ ಸಿನಿಮಾಗಳ ರಮ್ಯ ಕತೆಗಳು. ಮದುವೆಗಳಲ್ಲಿ ಸಿಗುತ್ತಿದ್ದ ಕಸಿನ್ಸ್ ಊಟವಾದ ಮೇಲೆ ಕೂತು ಅರ್ಧರಾತ್ರಿಯವರೆಗೂ ಹೇಳಿದ ದೆವ್ವದ ಕತೆಗಳು. ಬೆಳೆಯುತ್ತಾ ಹೋದಂತೆ ಮನೆಯಲ್ಲಿದ್ದ ದೊಡ್ಡ ಪುಸ್ತಕ ಸಂಗ್ರಹದಿಂದ ನನ್ನ ತಂದೆ ಆರಿಸಿ ಕೊಡುತ್ತಿದ್ದ ಇಂಗ್ಲಿಶ್, ಕನ್ನಡ ಪುಸ್ತಕಗಳು. ಗಲಿವರ್ಸ್ ಟ್ರಾವಲ್ಸ್ ಇಂದ ಡಾಕ್ಟರ್ ಜೆಕಿಲ್ ಅನ್ಡ್ ಹೈಡ್ ವರೆಗೂ. ಅಗಾಥಾಕ್ರಿಸ್ಟಿಯಿಂದ ಗಾರ್ಕಿ, ಟಾಲ್‌ಸ್ಟಾಯ್ ವರೆಗೂ. ಗಾನ್ ವಿದ್ ದ ವಿಂಡ್‌ನಿಂದ ಪ್ರೈಡ್ ಎಂಡ್ ಪ್ರೆಜುಡಿಸ್ ವರೆಗೂ. ಇನ್ನು ಕನ್ನಡದಲ್ಲಿ ಹೇಳುತ್ತಾ ಹೋದರೆ ಗಳಗನಾಥ ವಾಣಿ, ತ್ರಿವೇಣಿ, ಅನಕೃ, ತರಾಸು, ಕಾರಂತ, ಕುವೆಂಪು, ಭೈರಪ್ಪ, ಮಾಸ್ತಿ... ಹೀಗೆ ಕೊನೆಯಿಲ್ಲ.

ಹಾಗೆ ನೋಡಿದರೆ ನಾನು ಓದಿದ್ದು ವಿಜ್ಞಾನ. ಬಿ.ಎಸ್‌ಸಿ ಮಾಡಿ ಬಿ.ಎಲ್ ಮಾಡಿದೆ. ತೆಗೆದುಕೊಂಡಿದ್ದು ಕನ್ನಡ ಸೆಕಂಡ್ ಲ್ಯಾಂಗ್ವೇಜ್ ಆಗಿ ಮಾತ್ರ. ಅದರಿಂದ ಕನ್ನಡದ ಹಳೆಯ ಕಾವ್ಯ, ನಾಟಕಗಳು ಇಷ್ಟು ಪರಿಚಯವಾಯಿತು. ಮುಂಬೈಗೆ ಹೋದಮೇಲೆ ಸೋಫಿಯಾ ಕಾಲೇಜು ನಡೆಸಿದ ಕೆಲವು ಶಾರ್ಟ್ ಟರ್ಮ್ ಕೋರ್ಸುಗಳಲ್ಲಿ ನಾನು ಮಾರ್ಕ್ವೆಝ್, ಕಾಫ್ಕಾ, ನೆರುದ, ಬೊರ್ಹೆಸ್, ಮುಂತಾದ ಮಹತ್ವದ ಬರಹಗಾರರ ಬಗ್ಗೆ ಅಭ್ಯಸಿಸಿದ್ದು. ಆಗ ಪ್ರಖ್ಯಾತ ಸ್ತ್ರೀವಾದಿ ಜರ್ಮೇನ್ ಗ್ರಿಯರ್ ಮುಂಬೈಗೆ ಬಂದು ಹಲವು ಉಪನ್ಯಾಸಗಳನ್ನು ಕೊಟ್ಟಿದ್ದು ನನ್ನ ಅದೃಷ್ಟ.

ನನಗೆ ಮೊದಲಿಂದಲೂ ಕತೆ ಬರೆಯಲು ಆಸೆ. ಆದರೆ ಸಂಕೋಚ... ಮೊದಲ ಕತೆ ಬರೆದಾಗ ಹದಿನೈದು ಹದಿನಾರು ವರ್ಷವಿರಬೇಕು. ಅದೇ ನಡೆದಿದ್ದ ಚೈನಾ ಜೊತೆ ಯುದ್ಧದ ಪರಿಣಾಮದಿಂದ ಅತಿ ಭಾವುಕಳಾಗಿ ಬರೆದಿದ್ದೆ. ಹುತಾತ್ಮನಾದ ಯುವ ಯೋಧನ ಹೆಂಡತಿ ಸಂಕಟವನ್ನು ಕುರಿತಾದದ್ದು. ಕತೆಯ ಶೀರ್ಷಿಕೆ ನೆನಪಿಲ್ಲ. ಅದನ್ನು 'ಕಲ್ಪನಾ' ಎಂಬ ಕಾವ್ಯನಾಮದಲ್ಲಿ 'ವಿಜಯವಾಣಿ' ಎಂಬ ಲೋಕಲ್ ಪೇಪರೊಂದರಲ್ಲಿ ಪ್ರಕಟಿಸಿದ್ದೆ. ಯಾರಿಗೂ